ರಸ್ತೆ ಕಾಮಗಾರಿ, ಸಣ್ಣಪುಟ್ಟ ಬ್ರಿಡ್ಜ್‌ಗಳು ಮನೆ ಕೆಲಸಕ್ಕೆ ಬೇಕಾಗುವ ಜಲ್ಲಿಗಳು ಸಿಗುತ್ತಿಲ್ಲ. ಅದರಿಂದ ಎಲ್ಲಾ ಕನ್ಸಟ್ರಕ್ಷನ್ ವರ್ಕ್ ಕಂಪ್ಲೀಟ್ ಆಗದೆ ನಿಂತಿವೆ. ಇನ್ನು ಒಂದೇ ತಿಂಗಳು ಇರುವುದು ಮಳೆಗಾಲ. ಒಂದು ತಿಂಗಳಲ್ಲಿ ಕಾಮಗಾರಿಯಾಗದಿದ್ದರೆ ಏಳು ತಿಂಗಳು ನಂತರ ಕಾಯಬೇಕಾಗುತ್ತದೆ. ಹಾಗಾಗಿ ಗಣಿಗಾರಿಕೆಗೆ ಮತ್ತೆ ಸ್ಫೋಟ ಮಾಡಲಿಕ್ಕೆ ಅವಕಾಶ ಮಾಡಿಕೊಡಬೇಕು. ಯಾವ ರೀತಿಯಾಗಿ ರೆಗ್ಯುಲೇಟ್ ಮಾಡುತ್ತೀರೋ ಮಾಡಿ. ಅದನ್ನು ಮಾಡದೇ ಹೋದರೆ ನಮ್ಮ ಎಲ್ಲಾ ಕೆಲಸಗಳು ಹಾಗೆಯೇ ನಿಂತು ಬಿಡುತ್ತವೆ. ಅದಕ್ಕಾಗಿ ಅದನ್ನು ಮಾಡಬೇಕೆಂದು ಸರ್ಕಾರದಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಸಾರಿಗೆ ಸಚಿವರು) : ಮಾನ್ಯ ಅಧ್ಯಕ್ಷರೇ, ಅಧಿಕಾರಿಗಳನ್ನು ಕರೆಸಿ ಆ ಸಮಸ್ಯೆಯನ್ನು ಬಗೆಹರಿಸಲಿಕ್ಕೆ ಪ್ರಯತ್ನಮಾಡುತ್ತೇನೆ.

ವಿತ್ತೀಯ ಕಾರ್ಯಕಲಾಪಗಳು

ಬೇಡಿಕೆಗಳ ಮಂಡನೆ (1,2,3,4,46,8)

ಬೇಡಿಕೆ ಸಂಖ್ಯೆ 1 : ವ್ಯವಸಾಯ

ಶ್ರೀ ಸಿ. ಬೈರೇಗೌಡ (ಮಾನ್ಯ ಕೃಷಿ ಸಚಿವರು) : ಮಾನ್ಯ ಅಧ್ಯಕ್ಷರೆ, 'ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1999ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ವ್ಯವಸಾಯಕ್ಕೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 67,62,95,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 2,01,02,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು ಕೋರುತ್ತೇನೆ."

ಬೇಡಿಕೆ ಸಂಖ್ಯೆ 2 : ತೋಟಗಾರಿಕೆ

ಶ್ರೀ ಡಿ.ಟಿ. ಜಯಕುಮಾರ್ (ಮಾನ್ಯ ತೋಟಗಾರಿಕಾ ಸಚಿವರು) : ಮಾನ್ಯ ಅಧ್ಯಕ್ಷರೆ, "ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1999ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ತೋಟಗಾರಿಕೆ"ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 21,61,42,000 ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 27,50,000ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಬೇಡಿಕೆ ಸಂಖ್ಯೆ 3 : ಪಶುಸಂಗೋಪನೆ

ಶ್ರೀ ಬಿ.ಬಿ. ನಿಂಗಯ್ಯ (ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೆ, 'ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1998ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಪಶುಸಂಗೋಪನೆಗೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ

ಖಾತೆಯಲ್ಲಿ29,36,59,000ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು ಕೋರುತ್ತೇನೆ".

ಬೇಡಿಕೆ ಸಂಖ್ಯೆ 4 : ಮೀನುಗಾರಿಕೆ, ಬೇಡಿಕೆ ಸಂಖ್ಯೆ-46 : ರೇವು ಮತ್ತು ಜಲಸಾರಿಗೆ ಸೇವೆಗಳು

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಮಾನ್ಯ ಮೀನುಗಾರಿಕೆ, ರೇವು ಮತ್ತು ಜಲಸಾರಿಗೆ ಸೇವೆಗಳ ಸಚಿವರು) : ಮಾನ್ಯ ಅಧ್ಯಕ್ಷರೆ, 'ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1999 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಮೀನುಗಾರಿಕೆ"ಹಾಗೂ "ರೇವು ಮತ್ತು ಜಲ ಸಾರಿಗೆ ಸೇವೆಗಳಿಗೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 5,84,92,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 1,14,25,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಹಾಗೂ ಅನುಕ್ರಮವಾಗಿ ರಾಜಸ್ವ ಖಾತೆಯಲ್ಲಿ

1,13,45,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 93,75,000 ರೂ.ಗಳಿಗಿಂತ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು ಕೋರುತ್ತೇನೆ."

ಬೇಡಿಕೆಗಳನ್ನು ಮಂಡಿಸಲಾಯಿತು.

ಅಧ್ಯಕ್ಷರು : ಮಾನ್ಯ ಖಿಂಡ್ರೆಯವರು ತಾವು ಇವತ್ತು ಚರ್ಚೆ ಪ್ರಾರಂಭ ಮಾಡಬೇಕು. ಈಗಲೇ ಪ್ರಾರಂಭ ಮಾಡಬೇಕು. ಇಲ್ಲದಿದ್ದರೆ ನಮಗೆ ಸಮಯ ಇಲ್ಲ. ನಮಗೆ ಏನಾಗುತ್ತದೆ ಎಂದರೆ ಬಿಎಸ್‌ಸಿ ನಲ್ಲಿ ಒಂದು ನಿರ್ಣಯ ಆಗುತ್ತದೆ, ಇಲ್ಲೊಂದು ರೀತಿಯಲ್ಲಿ ಆಗುತ್ತದೆ. ಇಷ್ಟು ಪ್ರಮುಖವಾದಂತಹ ಇಲಾಖೆಗಳು ಇದೆ. ಇವತ್ತು ನಾವು ಕಳೆದರೆ ಮತ್ತೆ6ನೇ ತಾರೀಖು ಸಮಾವೇಶಗೊಳ್ಳುತ್ತಿದ್ದೇವೆ. ಅವತ್ತು ಇನ್ನೇನು ತೊಂದರೆಗಳು ಬರುತ್ತವೆಯೋ ಗೊತ್ತಿಲ್ಲ. ಇವತ್ತು ಈ ಬೇಡಿಕೆಗಳ ಬಗ್ಗೆ ಚರ್ಚೆ ಆಗಬೇಕೆಂದು ನಾನು ಅಪೇಕ್ಷೆ ಪಡುತ್ತೇನೆ. I want these demands to be discussed. The Minister has done some good work. ಅವರಿಗೆ ರಿಪ್ಲೈ ಕೊಡುವುದಕ್ಕೆ ಮೂರು ವರ್ಷಗಳಿಂದ ಅವಕಾಶ ಸಿಕ್ಕಿಲ್ಲ ಎನ್ನುವ ಮಾತನ್ನು ಸಹ ಹೇಳುತ್ತಿದ್ದಾರೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಮಾನ್ಯ ಅಧ್ಯಕ್ಷರೆ, ತಾವು ಎಂಟೆಂಟು ಸಬ್ಜೆಕ್ಟ್‌ನ್ನು ಎರಡೆರಡು ದಿವಸಕ್ಕೆ ಇಡುತ್ತಿದ್ದೀರಿ.

ಅಧ್ಯಕ್ಷರು : ಈಗ ಆಗಿ ಹೋಗಿ ಇವು ಉಳಿದಿರುವುದು, ಇನ್ನೂ ಸಾಕಷ್ಟು ಬೇಡಿಕೆಗಳು ಇದ್ದಾವೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಸಿರಿಕಲ್ಚರ್ ಸಹ ಈ ಬೇಡಿಕೆ ಒಳಗೇ ಬರುತ್ತದೆ. ಸಿರಿಕಲ್ಚರ್ ಇಂಡಸ್ಟ್ರಿಯೊಳಗೆ ಇಟ್ಟರೆ, ಇವೆರಡೂ ಬೇರೆ ಬೇರೆ ಎಂಬ ಭಾವನೆ ಉದ್ಭವ ಆಗುತ್ತದೆ. ಅದು ಏಕೆ ಹೀಗೆ ಆಗುತ್ತಿದೆ? ಒಟ್ಟಿಗೇ ಚರ್ಚೆ ಮಾಡುವುದಕ್ಕೆ ಅನುಕೂಲ ಆಗುತ್ತದೆ.

ಅಧ್ಯಕ್ಷರು : ಇವತ್ತು ಚರ್ಚೆ ಪ್ರಾರಂಭ ಆಗುತ್ತಿರಲಿ. ಇವತ್ತೇ ಏನು ಚರ್ಚೆ ಮುಗಿದು ಹೋಗುವುದಿಲ್ಲ. I will consider your suggeestion. ನೀವು ಹೇಳುವುದನ್ನು ನಾನು ಒಪ್ಪುತ್ತೇನೆ.

ಬೇಡಿಕೆ ಸಂಖ್ಯೆ 8 : ರೇಷ್ಮೆ ವ್ಯವಸಾಯ

ಶ್ರೀ ವರದೇ ಗೌಡ (ರೇಷ್ಮೆ ಖಾತೆ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೆ, "ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.03.1999ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ರೇಷ್ಮೆ ವ್ಯವಸಾಯಕ್ಕೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 32,19,10,000 ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ10,000,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಬೇಡಿಕೆಗಳನ್ನು ಮಂಡಿಸಲಾಯಿತು.

1998 –99ನೇ ಸಾಲಿನ ಈ ಕೆಳಕಂಡ ಅನುದಾನ ಬೇಡಿಕೆಗಳ ಮೇಲಿನ ಚರ್ಚೆ ಬೇಡಿಕೆ ಸಂಖ್ಯೆ (1, 2, 3, 4, 46, 8)

+ಶ್ರೀ ವಿಜಯ ಕುಮಾರ್ ಖಂಡ್ರೆ (ಭಾಲ್ಕಿ) : ಮಾನ್ಯ ಅಧ್ಯಕ್ಷರೆ, ವ್ಯವಸಾಯ ತೋಟಗಾರಿಕೆ, ಪಶುಸಂಗೋಪನಾ ಇಲಾಖೆ, ಮೀನುಗಾರಿಕೆ, ರೇವು ಮತ್ತು ಜಲ ಸಾರಿಗೆ ಸೇವೆಗಳು ಹಾಗೂ ರೇಷ್ಮೆ ವ್ಯವಸಾಯ ಇಲಾಖೆಗಳ ಬೇಡಿಕೆಗಳನ್ನು ವಿರೋಧಿಸಿ ಕೆಲವು ಮಾತುಗಳನ್ನು ಹೇಳಲು ಇಚ್ಛಿಪಡುತ್ತೇನೆ. ನಮ್ಮ ದೇಶ ಕೃಷಿ ಪ್ರಧಾನವಾದಂತಹ ದೇಶ. ಇಲ್ಲಿ ಅರ್ಧಕ್ಕಿಂತಲೂ ಹೆಚ್ಚಿನ ಜನ ಕೃಷಿಯಲ್ಲಿ ತೊಡಗಿರುತ್ತಾರೆ. ಇಡೀ ದೇಶಕ್ಕೆ ಆಹಾರವನ್ನು ಪೂರೈಸುವ ಬಹಳ ದೊಡ್ಡ ಜವಾಬ್ದಾರಿ ಕೃಷಿ ಇಲಾಖೆ ಮೇಲಿದೆ. ಈಗಾಗಲೇ ನಮ್ಮ ದೇಶದ ಜನಸಂಖ್ಯೆ ಬಹಳಷ್ಟು ಹೆಚ್ಚು ಇದೆ ಮತ್ತು ಬಹಳ ವೇಗದ ಗತಿಯಲ್ಲಿ ಜನಸಂಖ್ಯೆ ಹೆಚ್ಚಾಗುತ್ತಿದೆ. ಈ ಬೆಳೆಯುತ್ತಿರುವ ಜನಸಂಖ್ಯೆಗೆ ಸಾಕಷ್ಟು ಆಹಾರವನ್ನು ಪೂರೈಸುವ ಬಹಳ ಒಂದು ದೊಡ್ಡ ಜವಾಬ್ದಾರಿ ಕೃಷಿ ಇಲಾಖೆಯ ಮೇಲಿದೆ. ಇವೆಲ್ಲಾ ಆಗಬೇಕಾದರೆ ಇಲ್ಲಿ ನಮ್ಮ ದೇಶದಲ್ಲಿ ಫುಡ್‌ಗ್ರೈನ್ಸ್ ಉತ್ಪಾದನೆ ಹೆಚ್ಚು ಮಾಡಬೇಕಾಗಿದೆ. ಈ ದಿಕ್ಕಿನಲ್ಲಿ ಏನೇನು ಕಾರ್ಯಗಳನ್ನು ಮಾಡಬೇಕೋ ಅವುಗಳನ್ನು ಮಾಡಬೇಕಾಗಿದೆ. ಈಗ ಕೃಷಿ ಇಲಾಖೆಯವರ ಮೇಲಿರತಕ್ಕ ಬಹಳ ಒಂದು ದೊಡ್ಡ ಜವಾಬ್ದಾರಿ ಎಂದರೆ ಆಹಾರ ಉತ್ಪಾದನೆಯನ್ನು ಹೆಚ್ಚು ಮಾಡುವುದು. ಈ ದಿಕ್ಕಿನಲ್ಲಿ ಕೆಲಸ ಆಗಬೇಕಾದರೆ ರೈತರಿಗೆ ಬಹಳಷ್ಟು ಸೌಲಭ್ಯಗಳನ್ನೆಲ್ಲಾ ಮಾಡಿಕೊಡಬೇಕಾದ ಬಹಳ ದೊಡ್ಡ ಜವಾಬ್ದಾರಿ ಸರ್ಕಾರದ ಮೇಲಿದೆ. ಇದರೊಳಗೆ ಮುಖ್ಯವಾದಂಥದ್ದು ಒಳ್ಳೆಯ ಬೀಜಗಳನ್ನು, ಉತ್ತಮ ಗುಣಮಟ್ಟದ ಬೀಜ ರೈತರಿಗೆ ಸಿಗುವ ಹಾಗೆ ಮಾಡಿಕೊಡಬೇಕಾಗಿದೆ. ರಸಗೊಬ್ಬರಗಳು ಕಡಿಮೆ ಬೀಳಲಾರದ ಹಾಗೆ ಸಮಯಕ್ಕೆ ಸರಿಯಾಗಿ ರೈತರಿಗೆ ಗೊಬ್ಬರ ಸಿಗುವ ಹಾಗೆ ವ್ಯವಸಸ್ಥೆ ಮಾಡಬೇಕಾಗಿದೆ. ಜೈವಿಕ ಬೀಜ ಗೊಬ್ಬರಗಳೂ ಸಹ ರೈತರಿಗೆ ಸಿಗುವ ಹಾಗೆ ಒಂದು ವ್ಯವಸ್ಥೆ ಮಾಡಬೇಕಾಗಿದೆ. ಸಸ್ಯ ಸಂರಕ್ಷಣಾ ರಸಾಯನಿಕಗಳು ರೈತರಿಗೆ ಸಮಯಕ್ಕೆ ಸರಿಯಾಗಿ ಸಿಗುವ ಹಾಗೆ ವ್ಯವಸ್ಥೆ ಮಾಡಬೇಕಾಗಿದೆ. ಈ ದಿಕ್ಕಿನಲ್ಲಿ ಸರ್ಕಾರ ಏನು ಮಾಡುತ್ತಿದೆ ಎನ್ನುವುದನ್ನು ನಾವು ನೋಡಿದರೆ ಅದೇನು ಎದ್ದು ಕಾಣುತ್ತದೆ ಎಂದರೆ ಇನ್ನೂ ಸರ್ಕಾರದವರು ಬಹಳಷ್ಟು ಕೆಲಸ ಮಾಡಬೇಕಾಗಿದೆ. ಕರ್ನಾಟಕ ಸ್ಟೇಟ್ ಸೀಡ್ಸ್ ಸರ್ಟಿಫಿಕೇಟ್ ಏಜೆನ್ಸಿಯವರು ರೈತರಿಗೆ ಒಳ್ಳೆಯ ರೀತಿಯ ಬೀಜಗಳು

ಸಿಗುವ ಹಾಗೆ ವ್ಯವಸ್ಥೆ ಮಾಡಬೇಕು, ಆ ವ್ಯವಸ್ಥೆ ಸರಿಯಾಗಿ ಆಗಿಲ್ಲ. ತಾವೇ ನೋಡುತ್ತಿದ್ದೀರಿ, ಪ್ರತಿ ಸಲ ಬಿತ್ತನೆ ಸಮಯದಲ್ಲಿ ಅನೇಕ ಕಡೆ ಬೀಜಗಳು ಸರಿಯಾಗಿ ಸಮಯಕ್ಕೆ ಸಿಗದೇ ರೈತರಿಗೆ ಬಹಳ ತೊಂದರೆ ಆಗುತ್ತಿದೆ. ಇದರ ಜೊತೆಯಲ್ಲಿ ಹೋದ ವರ್ಷ ಬಸವಕಲ್ಯಾಣದಲ್ಲಿ ರೈತರು ಬಹಳ ದೊಡ್ಡ ಸಂಕಷ್ಟದಲ್ಲಿ ಸಿಕ್ಕಿ ಬಿದ್ದಿದ್ದರು. ಯಾರು ಬೀಜ ಅವರಿಗೆ ಕೊಡಬೇಕಾಗಿತ್ತು ಅಂತಹ ಮಾರಾಟಗಾರರೆಲ್ಲಾ ಜಿನೈನ್ ಅಲ್ಲದೇ ಇರುವಂತಹ ಸ್ಪೂರಿಯಸ್ ಸೀಡ್ಸನ್ನು ರೈತರಿಗೆ ಕೊಟ್ಟು ಕೋಟ್ಯಾಂತರ ರೂಪಾಯಿಯ ಹಾನಿಯನ್ನು ಮಾಡಿದ್ದಾರೆ. ಇದನ್ನು ತಡೆಗಟ್ಟಲಿಕ್ಕೆ ಸರ್ಕಾರ ಏನು ವ್ಯವಸ್ಥೆ ಮಾಡಬೇಕಿತ್ತು, ಆ ವ್ಯವಸ್ಥೆ ಮಾಡಿಲ್ಲ. ಅದಕ್ಕೆ ಈ ದಿಕ್ಕಿನಲ್ಲಿ ಸರ್ಕಾರ ಗಂಭೀರವಾಗಿ ಚಿಂತನೆ ಮಾಡಿ ರೈತರ ಸಮಸ್ಯೆಯನ್ನು ಬಗೆಹರಿಸಬೇಕು. ಅವರಿಗೆ ಒಳ್ಳೆಯ ದರ್ಜೆಯ ಬೀಜಗಳು ಸಿಗುವ ಹಾಗೆ ವ್ಯವಸ್ಥೆ ಮಾಡಬೇಕೆಂದು ನಾನು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ಇನ್ನೊಂದು ವಿಚಾರ ಏನೆಂದರೆ ಸ್ಪೋರಿಯಸ್ ಸೀಡ್ಸನ್ನು ಯಾರು ರೈತರಿಗೆ ಕೊಟ್ಟಿದ್ದಾರೆ, ಈ ಮಾರಾಟಗಾರರ ಮೇಲೆ ಏನು ಆಕ್ಷನ್ ಆಗಿದೆ ಎನ್ನುವುದರ ಬಗ್ಗೆ ನಾವು ನೋಡಿದರೆ ಇವರಿಗೆ ಯಾವ ತರಹದ ಶಿಕ್ಷೆ ಆಗಿಲ್ಲ. ಸರಿಯಾದ ರೀತಿಯಲ್ಲಿ ಶಿಕ್ಷೆ ಆಗದೇ ಇದ್ದುದಕ್ಕೆ ಇಂತಹ ಮಾರಾಟಗಾರರು ಹೆಚ್ಚಿಚ್ಚು ಆಗುತ್ತಿದ್ದಾರೆ. ಮತ್ತು ಇವರಿಂದ ರೈತರಿಗೆ ಬಹಳಷ್ಟು ಹಾನಿ ಹೆಚ್ಚಾಗುತ್ತಿದೆ. ಇದರ ಬಗ್ಗೆ ಈಗಾಗಲೇ ಕೃಷಿ ಸಚಿವರು ಮಾತನಾಡುವಾಗ ಹೇಳಿದರು, ಇವರ ಬಗ್ಗೆ ನಾವು ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದರು. ಬಹಳ ಬೇಗನೇ ಈ ಕ್ರಮವನ್ನು ತೆಗೆದುಕೊಳ್ಳಬೇಕಾಗಿದೆ. ಇನ್ನೊಂದು ವಿಚಾರ ಎಂದರೆ ರೈತರಿಗೆ ಫರ್ಟಿಲೈಸರ್ಸ್ ಸಮಯಕ್ಕೆ ಸರಿಯಾಗಿ ಸಿಗುವ ಹಾಗೆ ವ್ಯವಸ್ಥೆ ಮಾಡುವುದು ಸರ್ಕಾರದ ಬಹಳ ದೊಡ್ಡ ಕರ್ತವ್ಯ. ಇದೆ. ಆದರೆ ಈ ದಿಕ್ಕಿನಲ್ಲಿ ಕಳೆದ ವರ್ಷ ಅವರೇನು ಮಾಡಿದ್ದಾರೆ ಎಂದು ನಾವು ನೋಡಿದರೆ ಸರ್ಕಾರ ತಮ್ಮ ರಿಪೋರ್ಟ್‌ನಲ್ಲಿ ಸಹ ಒಪ್ಪಿಕೊಂಡಿದ್ದಾರೆ. ಕೆಲವೊಂದು ಫರ್ಟಿಲೈಸರ್ಸ್ ಸಮಯಕ್ಕೆ ತಕ್ಕ ಹಾಗೆ ಅವರಿಂದ ಕೊಡಲಿಕ್ಕೆ ಆಗಲಿಲ್ಲ. ಉದಾಹರಣೆಗಾಗಿ 17:17:17 ಮತ್ತು ಇನ್ನೂ ಕೆಲವು ಫರ್ಟಿಲೈಸರ್ಸ್ ಸಮಯಕ್ಕೆ ಸರಿಯಾಗಿ ಕೊಡಲಿಕ್ಕೆ ಆಗಲಿಲ್ಲ ಎಂದೂ ಕೂಡ ಸರ್ಕಾರ ಒಪ್ಪಿದ್ದಾರೆ. ಆದರೆ ಅದರ ಬದಲಾಗಿ ಇನ್ನೂ ಬೇರೆ ಫರ್ಟಿಲೈಸರ್ಸ್ ರೈತರಿಗೆ ಸಿಗುವ ಹಾಗೆ ಮಾಡಿದ್ದೇವೆಂದು ಒಂದು ಕಡೆ ಹೇಳಿದ್ದಾರೆ. ಆದರೂ ಸಹ ಸಮಯಕ್ಕೆ ಸರಿಯಾಗಿ ರೈತರಿಗೆ ಫರ್ಟಿಲೈಸರ್ಸ್ ಸಿಗುವ ಹಾಗೆ ವ್ಯವಸ್ಥೆ ಮಾಡಿದಾಗ ಮಾತ್ರ ನಮ್ಮ ರೈತರಿಗೆ ಅನುಕೂಲ ಮಾಡಿಕೊಟ್ಟ ಹಾಗೆ ಆಗುತ್ತದೆ. ಮತ್ತು ಕೃಷಿ ಉತ್ಪಾದನೆ ಹೆಚ್ಚಿಗೆ ಮಾಡಲಿಕ್ಕೆ ಆಗುತ್ತದೆ. ಇದರ ಬಗ್ಗೆ ಸರ್ಕಾರ ಹೆಚ್ಚಿನ ಗಮನ ವಹಿಸಬೇಕಾದಂತಹ ಬಹಳ ಅವಶ್ಯಕತೆ ಇದೆ ಎಂದು ಹೇಳಬೇಕಾಗುತ್ತದೆ. ಇನ್ನೊಂದು ವಿಚಾರ ಎಂದರೆ ಕ್ವಾಲಿಟಿ ಬಗ್ಗೆಯೂ ಸಹ ಬಹಳ ಎಚ್ಚರದಿಂದ ಇರಬೇಕಾಗುತ್ತದೆ. ಇವತ್ತು ನಮ್ಮ ರಾಜ್ಯದಲ್ಲಿ ಕ್ವಾಲಿಟಿ ಕಂಟ್ರೋಲ್ ಲ್ಯಾಬರೇಟರಿಗಳು ಕೇವಲ ಮೂರು ಮಾತ್ರ ಇವೆ. ಅದು ಬೆಂಗಳೂರಿನಲ್ಲಿ ಒಂದು, ಬೆಳ್ತಂಗಡಿಯಲ್ಲಿ ಒಂದು, ಮತ್ತು ಧಾರವಾಡದಲ್ಲಿ ಒಂದು ಇದೆ. ಆದರೆ ಗುಲ್ಬರ್ಗಾ ಮತ್ತು ಬೀದರ್ ಕಡೆ ಯಾವುದೇ ತರಹದ ಲ್ಯಾಬರೇಟರಿಗಳು ಇಲ್ಲ. ಮಾನ್ಯ ಕೃಷಿ ಸಚಿವರಲ್ಲಿ ನನ್ನ ವಿನಂತಿ ಇದೆ. ಗುಲ್ಬರ್ಗಾ ಮತ್ತು ಬೀದರ್ ಭಾಗದಲ್ಲಿಯೂ ಸಹ ಇಂತಹ ಒಂದು ಲ್ಯಾಬರೇಟರಿಯನ್ನು ಬೇಗನೇ ಸ್ಥಾಪನೆ ಮಾಡಬೇಕು. ಅಂದರೆ ಆ ಭಾಗದ ರೈತರಿಗೆ ಇನ್ನೂ ಹೆಚ್ಚಿನ ರೀತಿಯಲ್ಲಿ ಅನುಕೂಲ ಮಾಡಿಕೊಟ್ಟ ಹಾಗೆ ಆಗುತ್ತದೆ. ಅಲ್ಲಿ ಕ್ವಾಲಿಟಿ ಕಂಟ್ರೋಲ್ ಏನು ತಪ್ಪಿ ಹೋಗುತ್ತಿದೆ, ಅದನ್ನು ನೀವು

ನಿಯಂತ್ರಣದಲ್ಲಿ ತರಲು ಸಾಧ್ಯವಾಗುತ್ತದೆ. ಮತ್ತು ರೈತರಿಗೆ ಸಹಾಯ ಮಾಡಲಿಕ್ಕೆ ಸಾಧ್ಯವಾಗುತ್ತದೆ. ಅದಕ್ಕೆ ಈ ಕ್ವಾಲಿಟಿ ಕಂಟ್ರೋಲ್ ಲ್ಯಾಬರೇಟರಿಯನ್ನು ಬೀದರ್ ಅಥವಾ ಗುಲ್ಬರ್ಗಾದಲ್ಲಿ ಈ ವರ್ಷ ಸ್ಥಾಪನೆ ಮಾಡಲು ತಾವು ವ್ಯವಸ್ಥೆ ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನೊಂದು ವಿಚಾರ ಎಂದರೆ ಇತ್ತೀಚೆಗೆ ಪರಿಸರದ ಬಗ್ಗೆ ಬಹಳಷ್ಟು ಚರ್ಚೆಗಳು ಆಗುತ್ತಿವೆ. ಆದ್ದರಿಂದ ಪರಿಸರಕ್ಕೆ ಹಾನಿ ಮಾಡದೇ ಇರತಕ್ಕಂಥಹ ಕೆಲವೊಂದು ಏನು ಪೆಸ್ಟಿಸೈಡ್ಸ್‌ಗಳು ಇದ್ದಾವೆ, ಅದಕ್ಕೆ ಹೆಚ್ಚಿಗೆ ಗಮನ ಕೊಡಬೇಕಾಗಿದೆ. ಈ ಇನ್‌ಸೆಕ್ಟಿಸೈಡ್ಸ್ ಮತ್ತು ಪೆಸ್ಟಿಸೈಡ್ಸ್ ಇವು ಬಹಳ ಮಹತ್ವವಾದಂತಹ ಇನ್‌ಪುಟ್ಸ್ ರೈತರಿಗೆ ಇದೆ. ತಮಗೆಲ್ಲಾ ಗೊತ್ತಿದ್ದ ಹಾಗೆ ಅನೇಕ ಕಡೆಯಿಂದ ಈ ಇನ್‌ಸೆಕ್ಟಿಸೈಡ್ಸ್ ಮತ್ತು ಪೆಸ್ಟಿಸೈಡ್ಸ್ ಒಳ್ಳೆಯ ಕ್ವಾಲಿಟಿಯದ್ದು ಇಲ್ಲದೇ ಇದ್ದ ಕಾರಣ ರೈತರು ಬಹಳಷ್ಟು ತೊಂದರೆಗೆ ಬಂದಿರುವ ವಿಚಾರ ತಮ್ಮೆಲ್ಲರ ಗಮನಕ್ಕೆ ಬಂದಿದೆ.

ಬೀದರ್, ಗುಲ್ಬರ್ಗಾ, ರಾಯಚೂರು ಭಾಗಗಳಲ್ಲಿ ಇಂಥ ನೂರಾರು ಕೇಸುಗಳು ಈಗಾಗಲೇ ದಾಖಲಾಗಿದೆ. ಇದರ ಬಗ್ಗೆ ಸರ್ಕಾರ ಗಮನಹರಿಸಬೇಕಾಗಿದೆ. ಅದರ ಜೊತೆಗೆ ಇನ್‌ಸೆಕ್ಟಿಸೈಡ್ಸ್, ಲ್ಯಾಬೊರೇಟರೀಸ್‌ಗಳೇನಿದೆ ಅದರ ಬಗ್ಗೆ ವಿಚಾರಣೆ ಮಾಡಿದಾಗ, ಗುಲ್ಬರ್ಗಾ ವಿಭಾಗದಲ್ಲಿ ಅಂಥದ್ದು ಯಾವುದೂ ಇಲ್ಲ. ಆದ್ದರಿಂದ ಗುಲ್ಬರ್ಗಾ ವಿಭಾಗದಲ್ಲಿ ಇಂಥ ಒಂದು ಟೆಸ್ಟಿಂಗ್ ಲ್ಯಾಬೊರೇಟರಿಯನ್ನು ಕೂಡಲೇ ಮಾಡಿಸಲು ಸರ್ಕಾರದವರು ವ್ಯವಸ್ಥೆ ಮಾಡಬೇಕು. ಮಾನ್ಯ ಕೃಷಿ ಸಚಿವರು ಮಾತನಾಡುತ್ತಾ ನಮ್ಮ ಕಾನೂನುಗಳು ಹಲ್ಲಿಲ್ಲದ ಕಾನೂನುಗಳಾಗಿವೆ ಎಂದು ಹೇಳಿದರು. Fake seeds, spurious insecticides and pesticides ಎಂದು ಹೇಳಿದರು. ಮಾನ್ಯ ಕೃಷಿ ಸಚಿವರು ಇನ್ನು ವಿಳಂಬ ಮಾಡಬಾರದು, ದಿನೇ ದಿನೇ ರೈತರ ಪರಿಸ್ಥಿತಿ ಹೆಚ್ಚಾಗಿ ಕೆಡುತ್ತಿದೆ. ಆದ್ದರಿಂದ ಕಾನೂನಿನಲ್ಲಿ ತಿದ್ದುಪಡಿ ತಂದು ಇನ್‌ಸೆಕ್ಟಿಸೈಡ್ಸ್ ಮತ್ತು ಪೆಸ್ಟಿಸೈಡ್ಸ್ ಮಾರಾಟ ಮಾಡುವಾಗ ಕಳಪೆ ದರ್ಜೆಯದನ್ನು ಯಾರು ಮಾರುತ್ತಿದ್ದಾರೆ ಅವರ ವಿರುದ್ಧ ಕ್ರಮತೆಗೆದುಕೊಂಡು ಶಿಕ್ಷೆ ಕೊಡುವ ಅಗತ್ಯತೆ ಇದೆ. ಹಾಲಿ ಇರತಕ್ಕ ಕಾನೂನಿನಿಂದ ಆ ಕೆಲಸ ಮಾಡಲು ಆಗುತಿಲ್ಲವೆಂದರೆ ಆದಷ್ಟು ಬೇಗ ಆ ಕಾನೂನನ್ನು ಬದಲಾವಣೆ ಮಾಡಿ ತಪ್ಪು ಮಾಡಿದವರಿಗೆ ಶಿಕ್ಷೆಯನ್ನು ಮಾಡತಕ್ಕ ಅವಶ್ಯಕತೆ ಇದೆ. ಇಲ್ಲಿ ಕೇಂದ್ರ ಸರ್ಕಾರದ ಜವಾಬ್ದಾರಿ ಇದೆ, ಇಲ್ಲದಿದ್ದರೆ ನಾವು ಈ ಮೊದಲೇ ಕ್ರಮ ತೆಗೆದುಕೊಳ್ಳುತ್ತಿದ್ದೆವು ಎಂದು ತಾವು ಹೇಳಿದಿರಿ. ನಮ್ಮ ರಾಜ್ಯದವರೇ ಆದ ಮಾನ್ಯ ದೇವೇಗೌಡರು ಪ್ರಧಾನಮಂತ್ರಿಗಳಾಗಿದ್ದಾಗ ತಾವು ಕಾನೂನಿನ ಬದಲಾವಣೆಯನ್ನು ಆಗಲೇ ಮಾಡಿಸಿಕೊಳ್ಳಬಹುದಾಗಿತ್ತು. ಆದರೆ ಆ ಅವಕಾಶವನ್ನು ನಾವು ಈಗ ಕಳೆದುಕೊಂಡಿದ್ದೇವೆ. ಈಗಲೂ ಸಹ ಹೊಸದಾಗಿ ಅಧಿಕಾರಕ್ಕೆ ಬಂದಿರುವ ಕೇಂದ್ರ ಸರ್ಕಾರಕ್ಕೆ ಪತ್ರವನ್ನು ಬರೆದು ಆದಷ್ಟು ಬೇಗ ಕಾನೂನಿನ ಬದಲಾವಣೆ ಮಾಡಿಸಿಕೊಳ್ಳಬೇಕು. ಬೀಜಗಳು, ಪೆಸ್ಟಿಸೈಡ್ಸ್, ಇನ್‌ಸೆಕ್ಟಿಸೈಡ್ಸ್‌ನ್ನು ಕಳಪೆ ದರ್ಜೆಯದನ್ನು ಮಾರಾಟ ಮಾಡುವ ಜನರಿಗೆ ಆದಷ್ಟು ಹೆಚ್ಚಿನ ಶಿಕ್ಷೆಯನ್ನು ಕೊಡುವ ಕೆಲಸವನ್ನು ಮಾಡಬೇಕು. ಹಾಗೆ ಮಾಡಿದರೆ ಮಾತ್ರ ರೈತರಿಗೆ ಸಹಾಯ ಮಾಡಿದಂತಾಗುತ್ತದೆ. ಮತ್ತು ಕೃಷಿ ಕ್ಷೇತ್ರದಲ್ಲಿ ಪ್ರಗತಿಯಾಗಲು ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಮಾರಾಟಗಾರರಿಂದ ರೈತರ ಹಗಲು ದರೋಡೆಯಾಗುತ್ತದೆ. ಇದರ ಬಗ್ಗೆ ತಾವು ಗಮನ ಹರಿಸಬೇಕು. ಮತ್ತೊಂದು ವಿಚಾರವೇನೆಂದರೆ, ರೈತರಿಗೆ ಸಮಯಕ್ಕೆ ಸರಿಯಾಗಿ ಸಾಲ ದೊರೆಯುವ ವ್ಯವಸ್ಥೆ

ಮಾಡಬೇಕು. ರೈತರಿಗೆ ಸಾಲವನ್ನು ಕೊಡತಕ್ಕ ಹಣಕಾಸು ಸಂಸ್ಥೆಗಳೇನಿದೆ ಅದರಲ್ಲಿ ಬಹಳಷ್ಟು ಬದಲಾವಣೆಯನ್ನು ರೈತರಿಗೆ ಸಹಾಯ ಮಾಡುವ ದೃಷ್ಟಿಯಿಂದ ಮಾಡುತ್ತೇವೆಂದು ತಾವು 1995ನೇ ಸಾಲಿನ ಕೃಷಿ ನೀತಿಯಲ್ಲಿ ಈಗಾಗಲೇ ಹೇಳಿದ್ದೀರಿ. ಜೊತೆಗೆ ಕೃಷಿಗೆ ಇಂಡಸ್ಟ್ರೀಯಲ್ ಸ್ಟೇಟಸನ್ನು ಕೊಡುತ್ತೇವೆಂದು ಇದರಲ್ಲಿ ಹೇಳಿದ್ದೀರಿ. ತಾವು ಆ ರೀತಿ ಕ್ರಮವನ್ನು ತೆಗೆದುಕೊಳ್ಳುವುದೇ ಆಗಿದ್ದರೆ, ಇಂದೇನು ಬ್ಯಾಂಕ್‌ಗಳಿಂದ ರೈತರಿಗೆ ಸಾಲ ಕೊಡುತ್ತಿದ್ದಾರೆ ಇದು ಬಹಳ ಕಡಿಮೆಯಾಗಿದೆ, ಇದನ್ನು ಎರಡು ಪಟ್ಟು ಮಾಡಬೇಕು ಎನ್ನತಕ್ಕ ಅಭಿಪ್ರಾಯ ನನ್ನದಾಗಿದೆ. ರೈತರ ಸಂಕಷ್ಟಗಳ ಬಗ್ಗೆ ಈಗಾಗಲೇ ಇಲ್ಲಿ ಚರ್ಚೆಯಾಗಿದೆ. ಆದರೆ ಇಂದು ಅನೇಕ ಕಡೆ ರೈತರಿಗೆ ಬ್ಯಾಂಕ್‌ಗಳಿಂದ, ವಿಎಸ್‌ಎಸ್ ಸೊಸೈಟಿಗಳಿಂದ ಸಾಲ ದೊರೆಯದೆ ಖಾಸಗಿ ಮನಿಲೆಂಡರ್ಸ್‌ಗಳಿಂದ ಸಾಲವನ್ನು ಪಡೆದು ವ್ಯವಸಾಯ ಮಾಡಬೇಕಾದ ಪರಿಸ್ಥಿತಿ ಇದೆ. ಅದರ ಜೊತೆಗಗೆ ಪೆಸ್ಟಿಸೈಡ್ಸ್ ಮತ್ತು ಇನ್‌ಸೆಕ್ಟಿಸೈಡ್ಸನ್ನು ಸ್ಪ್ರೇ ಮಾಡಲು ರೈತರು ಮಾರಾಟಗಾರದಿಂದ ಸಾವಿರಾರು ರೂಪಾಯಿಗಳ ಸಾಲವನ್ನು ಮಾಡಬೇಕಾದುದು ಎಲ್ಲರಿಗೂ ತಿಳಿದೇ ಇದೆ. ಜಂಟಿ ಸದನದ ಸಮಿತಿಯು ಅಲ್ಲಿಗೆ ಭೇಟಿ ನೀಡಿ ಪರಿಶೀಲನೆ ಮಾಡಿ ತನ್ನ ವರದಿಯಲ್ಲಿ ಇದರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಕೃಷಿ ಸಾಲದ ನೀತಿಯಲ್ಲಿ ಎಲ್ಲೋ ಒಂದು ಕಡೆ ಲೋಪವಿದೆಯೆಂಬುದು ಇದರಿಂದ ಗೊತ್ತಾಗುತ್ತದೆ. ರೈತರಿಗೆ ಇಂಥ ಸಂಸ್ಥೆಗಳ ಮೂಲಕ, ಬ್ಯಾಂಕ್‌ಗಳ ಮೂಲಕ ವಿಎಸ್‌ಎಸ್ ಮೂಲಕ ಎಷ್ಟರ ಮಟ್ಟಿಗೆ ಸಾಲವನ್ನು ಕೊಡಬೇಕೋ ಅದು ರೈತರಿಗೆ ಸಿಗುತ್ತಿಲ್ಲ. ಆದ್ದರಿಂದ ರೈತರು ಖಾಸಗಿ ಸಾಹುಕಾರರಿಂದ ಹೆಚ್ಚು ಬಡ್ಡಿಯನ್ನು ಕೊಟ್ಟು ಸಾಲವನ್ನು ತೆಗೆದುಕೊಳ್ಳಬೇಕಾದ ಪರಿಸ್ಥಿತಿ ಇದೆ. ಇದರ ಬಗ್ಗೆ ಸರ್ಕಾರದವರು ಬಹಳ ಗಂಭೀರವಾಗಿ ವಿಚಾರ ಮಾಡಬೇಕು. ರೈತರಿಗೆ ಸಮಯಕ್ಕೆ ಸರಿಯಾಗಿ ಸಾಲ ದೊರೆಯುವ ವ್ಯವಸ್ಥೆ ಮಾಡಬೇಕು. ಯಾವುದೇ ವಿಧದಲ್ಲೂ ಕಡಿಮೆ ಸಾಲ ರೈತರಿಗೆ ದೊರೆಯದಂತೆ ನೋಡಿಕೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ. ಸಾಲದ ಮೇಲಿನ ಬಡ್ಡಿಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಇಡೀ ವಿಶ್ವದಲ್ಲಿ ಬಡ್ಡಿಯ ದರವು 8-9 ಪರ್‌ಸೆಂಟ್ ಇರುವಾಗ ನಮ್ಮ ದೇಶದಲ್ಲಿ ಮಾತ್ರ ಬ್ಯಾಂಕ್‌ನವರು 12, 14, 18 ಪರ್‌ಸೆಂಟ್‌ವರೆಗೆ ಬಡ್ಡಿ ತೆಗೆದುಕೊಳ್ಳುತ್ತಾರೆ. ಅಗತ್ಯಬಿದ್ದು ರೈತರು ಅನ್ಯ ಮಾರ್ಗವಿಲ್ಲದೆ ಇಷ್ಟು ದುಬಾರಿ ಬಡ್ಡಿ ಕೊಟ್ಟು ಹಣವನ್ನು ಪಡೆದಾಗ ಅದನ್ನು ಮರುಪಾವತಿ ಮಾಡುವುದು ಹೇಗೆ ಎಂಬ ಬಗ್ಗೆ ನಾವು ಯೋಚನೆ ಮಾಡಬೇಕಾಗಿದೆ. ಸಾಲದ ಮೇಲಿನ ಬಡ್ಡಿ ಕಡಿಮೆ ಇರಬೇಕಾಗುತ್ತದೆ ಮತ್ತು ರೈತ ಬೆಳೆದುದ್ದನ್ನು ಮಾರಾಟ ಮಾಡಿ ಸಾಲವನ್ನು ತೀರಿಸುವ ಶಕ್ತಿ ಬರಬೇಕಾಗುತ್ತದೆ. ಆದ್ದರಿಂದ ಕೃಷಿ ಸಾಲಕ್ಕೆ 7-8 ಪರ್‌ಸೆಂಟ್ ಮಾತ್ರ ಬಡ್ಡಿ ಇರುವಂತೆ ವ್ಯವಸ್ಥೆ ಮಾಡಬೇಕು. ಆ ರೀತಿ ಇದ್ದಾಗ ಸಾಲವನ್ನು ಮನ್ನಾ ಮಾಡುವ ಸ್ಥಿತಿಯೇ ಬರುವುದಿಲ್ಲ. ಆ ಸ್ಥಿತಿ ಬರಲೂಬಾರದು. ಹಾಗಾದರೆ ನಮ್ಮ ಆರ್ಥಿಕ ಸ್ಥಿತಿ ಕೆಡತಕ್ಕದ್ದಾಗುತ್ತದೆ. ಆದ್ದರಿಂದ ರೈತರಿಗೆ ಕಡಿಮೆ ಬಡ್ಡಿ ದರದಲ್ಲಿ ಸಾಲ ಸಿಗುವ ವ್ಯವಸ್ಥೆ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ರೈತರಿಗೆ ಸೆನ್ಸ್ ಆಫ್ ಸೆಕ್ಯೂರಿಟಿ ಇರತಕ್ಕದ್ದು ಬಹಳ ಮುಖ್ಯ. ಅದು ಇಲ್ಲದಿದ್ದರೆ ರೈತರ ಪರಿಸ್ಥಿತಿ ಕೆಟ್ಟದಾಗಿರುತ್ತದೆ. ಇಂದು ರೈತ ಆಕಾಶದ ಕಡೆ ನೋಡತಕ್ಕ ಸ್ಥಿತಿ ಇದೆ, ಅವನ ಜೀವನ ಒಂದು ರೀತಿಯಾದ ಜೂಜಿನಂತಾಗಿದೆ. ಸುಮಾರು 75 ಭಾಗ ರೈತರು ಕೃಷಿಗೆ ಮಳೆಯನ್ನೇ ಅವಲಂಬಿಸಿದ್ದಾರೆ. 25 ಭಾಗ ಪ್ರದೇಶ ಮಾತ್ರ ನೀರಾವರಿ ಭೂಮಿ ಇದೆ. ಆದ್ದರಿಂದ ರೈತರಿಗೆ ಎಲ್ಲಾ ರೀತಿಯಾದ ಸಹಾಯ

ಒದಗಿಸುವ ಅವಶ್ಯಕತೆ ಇದೆ. ರೈತನಲ್ಲಿ ಸೆಕ್ಯೂರಿಟಿ ಫೀಲಿಂಗ್ ಬರಬೇಕಾದರೆ ಬೆಳೆ ವಿಮೆ ಬಹಳ ಮುಖ್ಯವಾದ ವಿಚಾರ. ಆದ್ದರಿಂದ ಸರ್ಕಾರದವರು ರೈತರಿಗೆ ಬೆಳೆ ವಿಮೆ ಮಾಡುವಲ್ಲಿ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಲು ವಿಚಾರ ಮಾಡಬೇಕು. ಆಂಧ್ರದಲ್ಲಿ ಮುಖ್ಯಮಂತ್ರಿ ಚಂದ್ರಬಾಬುನಾಯ್ಡುರರು ಕಾಂಪ್ರಹೆನ್ಸೀವ್ ಕ್ರಾಪ್ ಇನ್‌ಷ್ಯೂರೆನ್ಸ್ ಸಂಪೂರ್ಣವಾಗಿ ಜಾರಿಗೆ ತರಲು ವ್ಯವಸ್ಥೆ ಮಾಡುತ್ತಿದ್ದಾರೆ. ಅಲ್ಲಿ ಒಂದು ಹಳ್ಳಿಯನ್ನು ಒಂದು ಯೂನಿಟ್ ಆಗಿ ಪರಿಗಣಿಸಿ ಬೆಳೆ ವಿಮೆ ಮಾಡುತ್ತಿರುವುದನ್ನು ನಾವು ಪತ್ರಿಕೆಗಳಲ್ಲಿ ನೋಡಿ ತಿಳಿದಿರುತ್ತೇವೆ. Mr. Chandrababu Naidu is reported to have instructed his officials to prepare a plan to see that all the crops are brought under the comprehensive Insurance. This is what I have read.

ಇನ್ನೊಂದು ಬಹಳ ಮುಖ್ಯವಾದ ವಿಚಾರವೇನೆಂದರೆ, ರೈತರು ಬೆಳೆದಂಥ ಬೆಳೆಗೆ ಸಹಿಯಾದ ಬೆಲೆ ಸಿಗಬೇಕು. ಸರ್ವೇಸಾಮಾನ್ಯವಾಗಿ ಪ್ರತಿ ವರ್ಷ ಹಾರ್ವೆಸ್ಟಿಂಗ್ ಸೀಜನ್ ಬಂದಾಗ ರೈತರು ಬೆಳೆದಂಥ ಬೆಳೆಗೆ ಬಹಳ ಕಡಿಮೆ ಬೆಲೆ ಇರುತ್ತದೆ,3-4ತಿಂಗಳುಗಳಾದ ಮೇಲೆ ಬೆಲೆ ಜಾಸ್ತಿಯಾಗುತ್ತದೆ. ಇದರಿಂದ ರೈತರಿಗೆ ಏನು ಹಣ ದೊರೆಯಬೇಕೋ ಆ ಹಣ ದೊರೆಯುವುದಿಲ್ಲ. ಮಧ್ಯವರ್ತಿಗಳಿಗೆ ಕೋಟ್ಯಾಂತರ ರೂಪಾಯಿಗಳ ಲಾಭವಾಗುತ್ತಿದೆ. ರೈತನದ್ದು ಶ್ರಮ, ಆದರೆ ಅವನ ಶ್ರಮಕ್ಕೆ ತಕ್ಕಂತೆ ಪ್ರತಿಫಲ ದೊರೆಯುತ್ತಿಲ್ಲ. ಇದರ ಬಗ್ಗೆ ಸಹ ಸರ್ಕಾರ ಗಂಭೀರವಾಗಿ ವಿಚಾರ ಮಾಡಬೇಕಾಗಿದೆ.

5.40 ಪಿ.ಎಂ

ಇಲ್ಲಿ ಕೆಲವು ದೇಶಗಳಲ್ಲಿರತಕ್ಕಂತಹ ವ್ಯವಸ್ಥೆ ಏನಿದೆ, ಮ್ಯಾಕ್ಸಿಮಮ್ ಮತ್ತು ಮಿನಿಮಮ್ ಪ್ರೈಸ್ ಅದನ್ನು ನಮ್ಮ ಸರ್ಕಾರದವರು ಗಂಭೀರವಾಗಿ ವಿಚಾರ ಮಾಡಬೇಕಾಗಿದೆ, ಯಾವುದೇ ಬೆಳೆ ಏನು ಇರುತ್ತದೆ, ಅದನ್ನು ಸೈಂಟಿಫಿಕ್ ರೀತಿಯಿಂದ ಅದರ ಬಗ್ಗೆ ವಿಚಾರಣೆ ನಡೆಸಿ ಮಿನಿಮಮ್ ಪ್ರೈಸ್ ಫಿಕ್ಸ್ ಮಾಡಿದರೆ ಅದಕ್ಕಿಂದ ಕಡಿಮೆ ಬೆಲೆ ಮಾರುಕಟ್ಟೆಯಲ್ಲಿ ಆದರೆ ಸರ್ಕಾರ ಮಧ್ಯಸ್ತಿಕೆ ಮಾಡಿ ಆ ಬೆಲೆಯನ್ನು ಕಂಟ್ರೋಲ್ ಮಾಡುವುದಕ್ಕೆ ಪ್ರಯತ್ನ ಮಾಡಬೇಕಾಗಿದೆ. ಇದರ ಬಗ್ಗೆ ಸರ್ಕಾರ ಹೆಚ್ಚು ಮಹತ್ವ ಕೊಡುವ ಅವಶ್ಯಕತೆ ಇದೆ. ಇವತ್ತು ನಾವು ಮಾರ್ಕೆಟ್ ಇಂಟರ್ವೆನ್‌ಷನ್‌ಗೆ ಬಡ್ಜೆಟ್‌ನಲ್ಲಿ ಇಟ್ಟಿರುವ ಹಣ ಬಹಳ ಕಡಿಮೆ. ಅದು ಕೆಲವೊಂದು ಸಮಯದಲ್ಲಿ ಮಾತ್ರ ಉಪಯೋಗಕ್ಕೆ ಬರುವುದು. ಅದಕ್ಕೆ ಎಲ್ಲಾ ಫುಡ್‌ಗ್ರೈನ್ಸ್‌ಗೆ ಸಂಬಂಧಪಟ್ಟಂತೆ ಪ್ರಸಂಗ ಬಂದಾಗ ಸರ್ಕಾರದವರು ಮಧ್ಯಸ್ತಿಕೆ ವಹಿಸಿ ಮಿನಿಮಮ್‌ಗಿಂತ ಕಡಿಮೆ ಬೆಲೆ ಯಾವುದಕ್ಕೂ ಸಹ ಮಾರುಕಟ್ಟೆಯಲ್ಲಿ ಬಾರದೆ ಇದ್ದ ಹಾಗೆ ವ್ಯವಸ್ಥೆ ಮಾಡುವುದಕ್ಕೆ ಸ್ರಕಾರ ಸೀರಿಯಸ್ಸಾಗಿ ವಿಚಾರ ಮಾಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳತ್ತೇನೆ. ಇನ್ನೊಂದು ಮಹತ್ವದ ವಿಷಯವೇನೆಂದರೆ, ರೈತರು ಬೆಳೆದ ಬೆಳೆಗೆ ಮಾರುಕಟ್ಟೆ ಸಿಗುವುದಿಲ್ಲ. ನಮ್ಮ ರಾಜ್ಯದಲ್ಲಿ ನಾವು ಏನು ನೋಡುತ್ತಿದ್ದೇವೆ ಎಂದರೆ ಕಬ್ಬು ಬೆಳೆಗಾರರು ಬೀದರ್ ಮತ್ತು ಗುಲ್ಬರ್ಗಾ ಜಿಲ್ಲೆಗೆ ಅಥವಾ ಬೇರೆ ಜಿಲ್ಲೆಗಳಿಗೆ ಹೋಗಿ ಮಾರಾಟ ಮಾಡುತ್ತಿದ್ದಾರೆ. ಸಮಸ್ಯೆ ಏನಾಗಿದೆ ಎಂದರೆ, ನಮ್ಮ ಜಿಲ್ಲೆಯಲ್ಲಿ ಹೆಚ್ಚು ಕಬ್ಬು ಬೆಳೆಯುತ್ತಾರೆ, ಆದರೆ ನಮ್ಮಲ್ಲಿರುವುದು ಒಂದೇ ಒಂದು ಕೋ-

ಆಪರೇಟಿವ್ ಶುಗರ್ ಫ್ಯಾಕ್ಟರಿ ಮಾತ್ರ. ಆದ್ದರಿಂದ ಪ್ರತಿ ಸಲ ಮಹಾರಾಷ್ಟ್ರದ ಶುಗರ್ ಫ್ಯಾಕ್ಟರಿಯವರು ಬಂದು ಕಬ್ಬು ತೆಗೆದುಕೊಂಡು ಹೋಗುತ್ತಾರೆ. ಅವರ ಔದಾರ್ಯದ ಮೇಲೆ ನಾವು ಬದುಕುತ್ತಿದ್ದೇವೆ ಎನ್ನುವ ಪರಿಸ್ಥಿತಿ ಬಂದಿದೆ. ಅವರು ಕಡಿಮೆ ಬೆಲೆಯಲ್ಲಿ ತೆಗೆದುಕೊಳ್ಳತ್ತಾರೆ. ಒಂದು ರೀತಿ ಶೋಷಣೆ ನಡೆಯುತ್ತಿದೆ. ಅದರ ಜೊತೆಗೆ ಎಷ್ಟೋ ಸಲ ಜಿಲ್ಲಾ ಆಡಳಿತದವರು ಬ್ಯಾ ನ್ ಮಾಡುತ್ತಾರೆ. ಜಿಲ್ಲೆ ಹೊರಗಡೆ ಕಬ್ಬು ಹೋಗುವುದಕ್ಕೆ ಬಿಡುವುದಿಲ್ಲ. ಹೀಗೆಲ್ಲಾ ಆಗುವಾಗ ಅಲ್ಲಿ ನಾವು ಬ್ಯಾನ್ ತರುವಂತಹ ಪರಿಸ್ಥಿತಿಯಲ್ಲಿದ್ದೇವೆ. ಈ ವರ್ಷ ಎರಡು ಸಾರಿ ಬ್ಯಾನ್ ತಂದಿದ್ದರು. ನಾವೆಲ್ಲಾ ಸ್ಟ್ರೈಕ್ ಮಾಡುವ ಪರಿಸ್ಥಿತಿ ಬಂದಿತ್ತು. ಆ ಸಿಸ್ಟಮ್ ಪೂರ್ಣ ತೆಗೆಯಬೇಕೆಂದು ನಾನು ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಕಾರಣವೇನೆಂದರೆ, ಇಡೀ ವಿಶ್ವದಲ್ಲಿ ನಾವು ಲಿಬರಲೈಸೇಷನ್ ತಂದಿರುವಾಗ ವಿದೇಶದಿಂದ ನಮ್ಮ ದೇಶಕ್ಕೆ, ನಮ್ಮ ದೇಶದಿಂದ ಬೇರೆ ಕಡೆ ರಫ್ತು ಮಾಡುವುದಕ್ಕೆ ಎಕ್ಸಪೋರ್ಟ್ ಮತ್ತು ಇಂಪೋರ್ಟ್ ಸರಳೀಕರಣ ಆದ ಮೇಲೆ ಜಿಲ್ಲೆಯಲ್ಲಿ ಬ್ಯಾನ್ ಮಾಡುವ ಪರಿಸ್ಥಿತಿ ಬಂದರೆ, ರೈತರಿಗೆ ಬಹಳ ತೊಂದರೆ ಕೊಟ್ಟಂತೆ ಹಾಗಾಗುತ್ತದೆ. ಈ ಸಿಸ್ಟಮ್ ಪೂರ್ಣ ತಾವು ತೆಗೆದು ಬಿಡಬೇಕು. ಮತ್ತು ಸಕ್ಕರೆ ಕಾರ್ಖಾನೆಗಳು ಎಲ್ಲೆಲ್ಲಿ ಅವಶ್ಯಕತೆ ಇದೆ ಅಂತಹ ಕಡೆ ತಾವು ಹೆಚ್ಚಿನ ಪ್ರಮಾಣದಲ್ಲಿ ಸಹಾಯ ಕೊಟ್ಟು ಅಲ್ಲಿ ಕೋ-ಆಪರೇಟಿವ್ ಫ್ಯಾಕ್ಟರಿಗಳನ್ನು ತೆರೆಯುವುದಕ್ಕೆ ಪ್ರಯತ್ನ ಮಾಡಬೇಕು. ಆಗದೆ ಇದ್ದ ಪಕ್ಷದಲ್ಲಿ ಖಾಸಗಿ ಕಾರ್ಖಾನೆಗಳು ಅಲ್ಲಿ ಸ್ಥಾಪನೆ ಆಗುತ್ತದೆ ಅಂದರೆ ಅದಕ್ಕೆ ಕೂಡ ಇನ್ನು ಮುಂದೆ ತಾವು ಏನಾದರೂ ಮಾಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಗಡಿ ಪ್ರದೇಶದಲ್ಲಿ ಏನು ವಿಶೇಷ ಎಂದರೆ, ರೈತರು ಮಾರುಕಟ್ಟೆಗೆ ಹೋದಾಗ ಅಲ್ಲಿ ಬಹಳ ಸಮಸ್ಯೆಯಾಗುತ್ತಿತ್ತು. ನಮ್ಮ ಗಡಿ ಪ್ರದೇಶದಲ್ಲಿರತಕ್ಕಂತಹ ಅನೇಕ ಮಾರುಕಟ್ಟೆಗಳಲ್ಲಿ ಏನು ಪ್ರಾಬ್ಲಮ್ ಇದೆ ಎಂದರೆ, ವ್ಯಾಪಾರಸ್ತರು ನಮ್ಮ ಕಡೆ ಬರುವುದು ಬಹಳ ಕಡಿಮೆ. ಮಹಾರಾಷ್ಟ್ರದಲ್ಲಿ ಇರತಕ್ಕಂತಹ ಅಕ್ಕ ಪಕ್ಕದ ಹಳ್ಳಿಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ವ್ಯಾಪಾರ ಮಾಡುತ್ತಾರೆ. ರೈತರೂ ಕೂಡ ನಮ್ಮ ತಾಲ್ಲೂಕುಗಳಲ್ಲಿ ಇರತಕ್ಕಂತಹ ಎ.ಪಿ.ಎಂ.ಸಿ. ಮಾರುಕಟ್ಟೆಗೆ ಹೋಗುವುದರ ಬದಲು ಬೇರೆ ರಾಜ್ಯದ ಮಾರುಕಟ್ಟೆಗೆ ಹೋಗಿ ಮಾರಾಟ ಮಾಡುವ ಪರಿಸ್ಥಿತಿ ಬಂದಿದೆ. ಕಾರಣ ಅಲ್ಲಿ ಟ್ಯಾಕ್ಸ್ ಕಡಿಮೆ ಇದೆ. ಇಲ್ಲಿ ಟ್ಯಾಕ್ಸ ಜಾಸ್ತಿ ಇದೆ. ಹೀಗಿರುವುದರಿಂದ ನಮ್ಮ ಮಾರುಕಟ್ಟೆಯಲ್ಲಿ ಏನು ವ್ಯಾಪಾರವಾಗಬೇಕು, ಅದು ಬಹಳ ಕಡಿಮೆಯಾಗಿದೆ. ಅದಕ್ಕೆ ಯಾವ ತರಹವಾದರೂ ಒಂದು ಇಡೀ ದಕ್ಷಿಣ ಭಾರತಕ್ಕೆ ಕಾಮನ್ ಇರತಕ್ಕಂತಹ ಟ್ಯಾಕ್ಸೇಷನ್ ಪಾಲಿಸಿ ಮಾಡುವುದರ ಬಗ್ಗೆ ಸರ್ಕಾರ ಕೂಲಂಕಷವಾಗಿ ವಿಚಾರ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಸಿ. ಬೈರೇಗೌಡ : ನಮ್ಮ ಉತ್ವನ್ನ ಮಹಾರಾಷ್ಟ್ರಕ್ಕೆ ಹೋಗುತ್ತಿದೆ. ಇಲ್ಲ ಮಹಾರಾಷ್ಟ್ರದ ಉದ್ವನ್ನ ನಮ್ಮ ರಾಜ್ಯಕ್ಕೆ ಬರುತ್ತಿದೆ.....

ಶ್ರೀ ವಿಜಯಕುಮಾರ್ ಖಂಡ್ರೆ : ನಮ್ಮ ಉತ್ವನ್ನ ಮಹಾರಾಷ್ಟ್ರಕ್ಕೆ ಹೋಗಿ ವ್ಯಾಪಾರವೆಲ್ಲಾ ಹಾಳಾಗುತ್ತಿದೆ. ರೈತರು ಮಾರುಕಟ್ಟೆ ಯಾರ್ಡ್ ಇದ್ದರೂ ಕೂಡ ಬೇರೆ ರಾಜ್ಯಗಳಿಗೆ ಹೋಗಿ ಮಾರಾಟ ಮಾಡುತ್ತಿದ್ದಾರೆ. ಟ್ಯಾಕ್ಸೇಷನ್ ಅಲ್ಲಿ ಕಡಿಮೆ ಇದೆ. ನಮ್ಮ ರಾಜ್ಯದಲ್ಲಿ ಹೆಚ್ಚು ಇದೆ. ಆದ್ದರಿಂದ ಈ ಪರಿಸ್ಥಿತಿ

ಬಂದಿದೆ. ಇನ್ನೊಂದು ಮುಖ್ಯವಾದ ವಿಷಯ ತೋಟಗಾರಿಕೆ ಬಗ್ಗೆ ಹೇಳುವುದಾದರೆ ತಮಗೆ ಗೊತ್ತಿದ್ದ ಹಾಗೆ ಹೈದರಾಬಾದ್ ಕರ್ನಾಟಕ ಏರಿಯಾದಲ್ಲಿ ಬಿಸಿಲು ಜಾಸ್ತಿ ಇದೆ.

ಮಾಡ್ರೇಟ್ ಟೆಂಪರೆಚರ್ ಎಲ್ಲಿ ಇರುತ್ತದೆ, ಅಂತಹ ಕಡೆ ಹಾರ್ಟಿಕಲ್ಚರ್ ಬಹಳ ಫ್ಲರಿಷ್ ಆಗುವುದಕ್ಕೆ ಸಾಧ್ಯ ಇದೆ. ಯಾವ ತರಹ ಈಗಾಗಲೇ ಬಾಂಬೆ ಕರ್ನಾಟಕದಲ್ಲಿ ಆಗುತ್ತಿದೆ, ಇದೂ ಸಹ ಹಾರ್ಟಿಕಲ್ಚರ್‌ಗೆ ಹೇಳಿ ಮಾಡಿಸಿದ ವಾತಾವರಣ ಗುಲ್ಬರ್ಗ ಡಿವಿಷನ್‌ನಲ್ಲಿ ಇದೆ. ಯಾವ ಪ್ರಮಾಣದಲ್ಲಿ ಇಲ್ಲಿ ತೋಟಗಾರಿಕೆಗೆ ಪ್ರೋತ್ಸಾಹ ಸಿಗಬೇಕಾಗಿತ್ತೋ, ಆ ಪ್ರಮಾಣದಲ್ಲಿ ಪ್ರೋತ್ಸಾಹ ಸಿಗುತ್ತಿಲ್ಲ. ಅದಕ್ಕೆ ಅಲ್ಲಿ ಹೆಚ್ಚಿನ ಪ್ರಮಾಣದಲ್ಲಿ ತೋಟಗಾರಿಕೆಗೆ ತಾವು ಕೊಡಬೇಕು. ಬೇರೆ ಬೇರೆ ಹೊಸ ಹೊಸ ಬೆಳೆಗಳಿಗೆ ಪ್ರೋತ್ಸಾಹ ಕೊಟ್ಟು ಅಲ್ಲನ ಹಾರ್ಟಿಕಲ್ಚರ್ ಡಿಪಾರ್ಟಮೆಂಟ್‌ನಿಂದ ಆ ಭಾಗದಲ್ಲಿ ರೈತರಿಗೆ ಮಾರ್ಗದರ್ಶನ ಸಿಗುವ ಹಾಗೆ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಈ ತೋಟಗಾರಿಕೆ ಮಾಡುವುದಕ್ಕೆ ಹೊರಟ ರೈತರಿಗೆ ಸಾಕಷ್ಟು ಸಾಲ ಸಿಗುತ್ತಿಲ್ಲ, ಅದಕ್ಕೆ ಒಂದು ಹಾರ್ಟಿಕಲ್ಚರ್ ಫೈನಾನ್ಸ್ ಕಾರ್ಪೊರೇಷನ್ ಎಂದು ತಾವು ಮಾಡಿ ಕೇವಲ ಹಾರ್ಟಿಕಲ್ಚರ್ ಕ್ರಾಪ್‌ಗಳಿಗಾಗಿ ಮಾತ್ರಸಾಲ ಕೊಡುವ ಹಾಗೆ ಮಾಡಿದರೆ ನನಗನ್ನಿಸುತ್ತದೆ. ಆ ಭಾಗದಲ್ಲಿ ಹಾರ್ಟಿಕಲ್ಚರ್ ಹೆಚ್ಚಿನ ಪ್ರಮಾಣದಲ್ಲಿ ಫ್ಲರಿಷ್ ಆಗುವುದಕ್ಕೆ ಸಾಧ್ಯವಾಗುತ್ತದೆ. ಇದರ ಜೊತೆಗೆ ಇತ್ತೀಚಿನ ದಿನಗಳಲ್ಲಿ ಪೋಸ್ಟ್ ಹಾರ್ವೆಸ್ಟ್ ಟೆಕ್ನಾಲಜಿ ಬಗ್ಗೆ ಕೂಡ ರೈತರಿಗೆ ಬಹಳಷ್ಟು ಜ್ಞಾನ ಕೊಡುವ ಅವಶ್ಯಕತೆ ಇದೆ. ಈ ದಿಕ್ಕಿನಲ್ಲಿ ರೈತರಿಗೆ ಸಹಾಯ ಮಾಡುವ ಅವಶ್ಯಕತೆ ಇದೆ. ಕೋಲ್ಡ್ ಸ್ಟೋರೇಜ್ ಪ್ಲಾಂಟ್‌ಗಳು ಹೆಚ್ಚು ಹೆಚ್ಚು ಭಾಗದಲ್ಲಿ ಬಂದರೆ ಈ ತೋಟಗಾರಿಕೆ ಬೆಳೆಗಳನ್ನು ಸ್ಟೋರ್ ಮಾಡಿ ಅದನ್ನು ವಿವಿಧ ಮಾರುಕಟ್ಟೆಗಳಿಗೆ ಕಳುಹಿಸುವುದಕ್ಕೆ ಎಕ್ಸ್‌ಪೋರ್ಟ್ ಮಾಡುವುದಕ್ಕೆ ಸಾಧ್ಯವಾಗುತ್ತದೆ. ನಮ್ಮ ಪಕ್ಷದ ಜಿಲ್ಲೆಯಾದ ಮಹಾರಾಷ್ಟ್ರದ ಲಾಥೂರ್‌ನಲ್ಲಿ ನಾವು ಏನು ನೋಡುತ್ತಿದ್ದೇವೆಂದರೆ ನಾಲ್ಕು - ಎಂಟು ಕೋಲ್ಡ್ ಸ್ಟೋರೇಜ್‌ಗಳನ್ನು ತೆಗೆದಿದ್ದಾರೆ. ಆ ಕೋಲ್ಡ್ ಸ್ಟೋರೇಜ್‌ಗಳಿಗೆ ಸರ್ಕಾರ ಸಾಕಷ್ಟು ಸಬ್ಸಿಡಿ ಕೊಡುತ್ತದೆ. ಅದರ ಜೊತೆಗೆ ಕೋಲ್ಡ್ ಸ್ಟೋರೇಜ್‌ಗಳಿಗೆ ಏನು ಎಲಕ್ಟ್ರಿಸಿಟಿ ಉಪಯೋಗಿಸುತ್ತಾರೆ, ಆ ಎಲಕ್ಟ್ರಿಸಿಟಿ ಕೂಡ ಸಬ್ಸಿಡೈಸ್ ದರದಲ್ಲಿ ಅವರಿಗೆ ಸಿಗುತ್ತಿದೆ. ಮತ್ತು ಸರ್ಕಾರ ಅಲ್ಲ ತೋಟಗಾರಿಕೆ ಬೆಳೆಗಳನ್ನು ಅಂದರೆ, ದ್ರಾಕ್ಷಿ ಇನ್ನಿತರ ಕೆಲವು ಬೆಳೆಗಳನ್ನು ವಿದೇಶಗಳಿಗೆ ಕಳುಹಿಸುವುದಕ್ಕೆ ಪೂರ್ಣ ರೀತಿಯ ಸಹಾಯ ಮಾಡುತ್ತಿದೆ. ಅದು ಅಲ್ಲಿನ ಹವಾಮಾನ ವಾತಾವರಣ ಏನು ಇದೆ, ನಮ್ಮ ಭಾಗದಲ್ಲಿ ಸಹ ಆ ವಾತಾವರಣ ಇದೆ. ಆದ್ದರಿಂದ ಗುಲ್ಬರ್ಗ ಡಿವಿಷನ್‌ನಲ್ಲಿ ತೋಟಗಾರಿಕೆ ಬೆಳೆಗಳಿಗೆ ಇನ್ನು ಹೆಚ್ಚಿನ ಸ್ಕೋಪ್ ಇದೆ. ಅದಕ್ಕೆ ಅಲ್ಲಿ ತೋಟಗಾರಿಕೆ ಬೆಳೆಯನ್ನು ಹೆಚ್ಚಿಗೆ ಮಾಡುವುದಕ್ಕೆ ತಾವೆಲ್ಲಾ ಪ್ರಯತ್ನ ಮಾಡಬೇಕೆಂದು ನಾನು ತಮ್ಮಲ್ಲಿ ವಿನಂತಿಕೊಳ್ಳುತ್ತೇನೆ. ಇನ್ನೊಂದು ಮುಖ್ಯವಾದ ವಿಷಯವೇನೆಂದರೆ, ಕೃಷಿ ರಂಗದಲ್ಲಿ ಒಂದು ವೇಳೆ ಆಧುನೀಕರಣ ಮಾಡಬೇಕಾದರೆ ಅನೇಕ ಮೆಷಿನರಿಗಳ ಅವಶ್ಯಕತೆ ಇರುತ್ತದೆ. ಕೆಲವು ಮೆಷಿನರಿ 10 ರಿಂದ 20, 30 ಲಕ್ಷ ಬೆಲೆ ಬಾಳುವ ಕೆಲವು ಹಾರ್ವೆಸ್ಟ್ ಟೆಕ್ನಾಲಜಿಗೆ ಸಂಬಂಧಪಟ್ಟ ಮೆಷಿನ್‌ಗಳು ಮಾರುಕಟ್ಟೆಯಲ್ಲಿ ಬಂದಿವೆ. ಅಂತಹ ಮೆಷಿನ್‌ಗಳು ಆ ಭಾಗದಲ್ಲಿ ಹೆಚ್ಚಿಗೆ ಆದಾಗ ಮಾತ್ರ ರೈತರಿಗೆ ಅನುಕೂಲವಾಗುವುಗದಕ್ಕೆ ಸಾಧ್ಯವಾಗುತ್ತದೆ. ನಾನು ಏನು ನೋಡುತ್ತೇವೆಂದರೆ, ಅನೇಕ ಕಡೆ ಹಳ್ಳಿಗಳಲ್ಲಿ ಈ ಹಾರ್ವೆಸ್ಟಿಂಗ್ ಟೈಮ್‌ನಲ್ಲಿ ಕೆಲಸ

ಮಾಡುವವರು ಸಿಗುವುದಿಲ್ಲ. ಲೇಬರ್ ಸಿಗುವುದಿಲ್ಲ. ಲೇಬರ್ ಸಿಗದೇ ಇರುವುದರಿಂದ ಸಹ ಆ ಭಾಗದ ರೈತರಿಗೆ ಕೋಟ್ಯಾಂತರ ರೂಪಾಯಿ ಹಾನಿಯಾಗಿದೆ. ಇದನ್ನೆಲ್ಲಾ ತಪ್ಪಿಸಬೇಕಾದರೆ ರೈತರಿಗೆ ಹಾನಿಯಾಗದೆ ಇರುವ ಹಾಗೆ ನೋಡಬೇಕಾದರೆ ರೈತರು ಅಥವಾ ಆ ಭಾಗದ ಕೆಲವು ಜನರೆಲ್ಲಾ ಹಾರ್ವೆಸ್ಟಿಂಗ್ ಟೆಕ್ನಾಲಜಿಗೆ ಸಂಬಂಧಪಟ್ಟ ಹಾಗೆ ಮೆಷಿನರಿ ಖರೀದಿ ಮಾಡುವುದಕ್ಕೆ ಸರ್ಕಾರದವರು ಸಾಕಷ್ಟು ಸಹಾಯ ಮಾಡುವುದು ಅವಶ್ಯಕತೆ ಇದೆ. ಸಬ್ಸಿಡಿ ಕೊಡುವ ಅವಶ್ಯಕತೆ ಇದೆ. ಸಬ್ಸಿಡಿ ಕೊಟ್ಟಾಗ ಮಾತ್ರ ಮೆಷಿನರಿ ಹೆಚ್ಚಿನ ಪ್ರಮಾಣದಲ್ಲಿ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಮತ್ತು ಇನ್ನಿತರ ಯಾವುದೇ ತರಹದ ಮೆಷಿನರಿಗೆ ಹಣದ ಅವಶ್ಯಕತೆ ಇರುತ್ತದೆ. ಅದಕ್ಕೆ ಸರಳವಾಗಿ ಸಾಲ ಸಿಗುವ ಹಾಗೆ ಮತ್ತು ಸರ್ಕಾರದಿಂದ ಹೆಚ್ಚಿನ ಸಹಾಯ ಸಿಗುವಂತೆ ಮಾಡುವುದು ಅವಶ್ಯಕ ಇದೆ ಎಂದು ನಾನು ಹೇಳುತ್ತೇನೆ. ಇವತ್ತು ರೈತನಿಗೆ ಯಾವ ತರಹದ ಸಹಾಯ ಸರ್ಕಾರದಿಂದ ಸಿಗಬೇಕು, ಅದು ಸಿಗುತ್ತಿಲ್ಲ. ಆತ ಹಿಂದೆ ಆರ್ಗನೈಸ್ ಮಾಡದೆ ಇದ್ದ ಕಾರಣದಿಂದ ನಿರ್ಲಕ್ಷ್ಯವಾಗಿದೆ. ಇವತ್ತೂ ಸಹ ಅದೇ ರೀತಿ ಆಗಬೇಕೆಂದು ಇಲ್ಲ. ಇವತ್ತು ನಮ್ಮ ನಿಮ್ಮ ಕರ್ತವ್ಯ ಇದೆ. ರೈತರಿಗೆ ನಾವು ಎಷ್ಟು ಸಾಧ್ಯ ಅಷ್ಟು ಸಹಾಯ ಮಾಡಿ ಅವರು ತಮ್ಮ ಕಾಲ ಮೇಲೆ ತಾವು ನಿಲ್ಲುವ ಹಾಗೆ ಮಾಡಿ ಅವರು ಆಧುನೀಕರಣದ ಕಡೆ ಬರಬೇಕಾದರೆ ಅವರಿಗೆ ಸಹಾಯ ಮಾಡಿ, ಈ ದಿಕ್ಕಿನಲ್ಲಿ ಅವರ ಬೆಳೆಗಳಿಗೆ ಇನ್‌ಶ್ಯೂರೆನ್ಸ್ ಸಿಗುವ ಹಾಗೆ ಮಾಡಿ ನಾವು ಒಂದು ವೇಳೆ ಒಳ್ಳೆಯ ಬೀಜಗಳು, ಒಳ್ಳೆಯ ರೀತಿ ಗೊಬ್ಬರ ಈ ರೀತಿ ಎಲ್ಲಾ ಅವರಿಗೆ ಸಹಾಯ ಸಿಗುವ ಹಾಗೆ ಮಾಡಿ ಸಂಶೋಧನೆಯಾಗಿರತಕ್ಕಂತಹ ಫಲ ಏನು ಇದೆ, ರೈತರಿಗೆ ಮುಟ್ಟುವ ಹಾಗೆ ಮಾಡಿದರೆ ಒಳ್ಳೆಯದು ಇವತ್ತು ನಾವು ನೋಡುತ್ತಿದ್ದೇವೆ, ನಮ್ಮ ರಾಜ್ಯದಲ್ಲಿ ಆತ್ಮಹತ್ಯೆಗಳು ಆಗುತ್ತಿದೆ, ಈ ಆತ್ಮಹತ್ಯೆಗಳು ಆಗದ ಹಾಗೆ ನೋಡಿಕೊಳ್ಳುವುದಕ್ಕೆ ಸಾಧ್ಯ ಇದೆ. ರೈತ ಇಂತಹ ಕಷ್ಟದ ಪರಿಸ್ಥಿತಿಯಲ್ಲಿ ಏಕೆ ಬಂದಿದ್ದಾನೆನ್ನುವುದರ ಬಗ್ಗೆ ಕೂಲಂಕಷವಾಗಿ ಸರ್ಕಾರ ವಿಚಾರ ಮಾಡುವುದು ಅವಶ್ಯಕತೆ ಇದೆ. ಆದ ಮೇಲೆ ನಮ್ಮ ರಾಜ್ಯ ಸರ್ಕಾರದ ಕೆಳಗೆ ಇರತಕ್ಕಂತಹ ಇಲಾಖೆಗಳು ಸರಿಯಾದ ರೀತಿಯಲ್ಲಿ ಕೆಲಸ ಮಾಡಿದರೆ ನಮ್ಮ ಕೃಷಿ ಉತ್ಪನ್ನಗಳನ್ನು ನಾವು ಬಹಳಷ್ಟು ಹೆಚ್ಚಿನ ಪ್ರಮಾಣದಲ್ಲಿ ನಾವು ಹೆಚ್ಚಿಗೆ ಮಾಡುವುದಕ್ಕೆ ಸಾಧ್ಯವಾಗುತ್ತಗದೆ. ಅದಕ್ಕೆ ಈ ದಿಕ್ಕಿನಲ್ಲಿ ಸರ್ಕಾರ ಬಹಳ ಗಂಭೀರವಾಗಿ ವಿಚಾರ ಮಾಡುವುದು ಅವಶ್ಯಕತೆ ಇದೆ.

ಅಗ್ರಿಕಲ್ಚರಲ್ ಡೆವಲಪ್‌ಮೆಂಟಲ್ ಸೆಂಟರಗಳಿಂದೇನು ಸರ್ಕಾರದವರು ತೆಗೆದಿದ್ದಾರೆ, ನಮ್ಮ ರಾಜ್ಯದಲ್ಲಿ ಕೇವಲ ನಾಲ್ಕು ಇಂಥ ಸೆಂಟರ್‌ಗಳು ಇವೆ, ಗುಲ್ಬರ್ಗಾ ವಿಭಾಗದಲ್ಲಿ ಇಂಥ ಕೇಂದ್ರಗಳು ಯಾವುದೂ ಇಲ್ಲ. ಆ ಭಾಗದಲ್ಲಿ ಇಂಥ ಕೇಂದ್ರವೊಂದನ್ನು ಸರ್ಕಾರ ತೆಗೆದು ಆ ಭಾಗದ ರೈತ ಆ ಭಾಗದ ಭೂಮಿಗೆ ಅನುಗುಣವಾಗಿ, ಮಳೆಗೆ ಅನುಗುಣವಾಗಿ, ವಾತಾವರಣಕ್ಕೆ ಅನುಗುಣವಾಗಿ ಯಾವ ಬೆಳೆ ಬೆಳೆಸಬೇಕು ಎಂಬ ಬಗ್ಗೆ ತಿಳುವಳಿಕೆ ನೀಡುವ ಅವಶ್ಯಕತೆ ಬಹಳ ಇದೆ. ಆದರೆ ಗುಲ್ಬರ್ಗಾ ಅಥವಾ ಬೀದರ್‌ನಲ್ಲಿ ಅಂಥ ಕೇಂದ್ರಗಳ್ಯಾವುದೂ ಇಲ್ಲ. ಅಂಥ ಕೇಂದ್ರ ಅಲ್ಲಿ ಇದ್ದಿದ್ದರೆ ಈಗೇನು ಆ ಭಾಗದಲ್ಲಿ ದೊಡ್ಡ ಪ್ರಮಾಣದಲ್ಲಿ ಬೆಳೆ ನಾಶವಾಗಿದೆ ಅದನ್ನು ತಡೆಗಟ್ಟಬಹುದಾಗಿತ್ತು. ಗುಲ್ಬರ್ಗಾ ಮತ್ತು ಬೀದರ್‌ಗಳಲ್ಲಿ ಮಳೆಯಾಗಿದೆ. ಆದರೆ ಯಾವ ಸಮಯದಲ್ಲಿ ಮಳೆಯಾಗಬೇಕಾಗಿತ್ತೋ ಆ ಸಮಯದಲ್ಲಿ ಆಗಿಲ್ಲ. ಖಾರೀಫ್ ಸಮಯದಲ್ಲಿ ಕಡಿಮೆ ಮಳೆಯಾಯಿತು, ಅನಂತರ ನವೆಂಬರ್ ತಿಂಗಳಿನಲ್ಲಿ ಹೆಚ್ಚು

ಮಳೆಯಾಯಿತು, ಇದರಿಂದಾಗಿ ರೈತರಿಗೆ ಏನು ಮಾಡಬೇಕೋ ಗೊತ್ತಾಗಲಿಲ್ಲ. ಆದ್ದರಿಂದ ರೈತರಿಗೆ ಇದರ ಬಗ್ಗೆ ಮಾರ್ಗದರ್ಶನ ಮಾಡಿದ್ದರೆ ಅದಕ್ಕೆ ತಕ್ಕಂತೆ ಬೆಳೆ ಬೆಳೆದು ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಬೆಳೆ ನಾಶವಾಗದಂತೆ ನೋಡಿಕೊಳ್ಳಬಹುದಾಗಿತ್ತು. ಇದರ ಬಗ್ಗೆ ತಾವು ವಿಚಾರ ಮಾಡಿ ರೈತರಿಗೆ ಯಾವ ಕಾಲದಲ್ಲಿ ಯಾವ ಬೆಳೆ ಬೆಳೆಯಬೇಕು ಎಂಬ ಬಗ್ಗೆ ಮಾರ್ಗದರ್ಶನ ನೀಡಲು ಏರ್ಪಾಡು ಮಾಡಬೇಕೆಂದು ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ. ಬೀದರ್ ನಲ್ಲಿ ಮತ್ತು ಆ ಭಾಗದಲ್ಲಿ ಈಗೇನು ಬೆಳೆ ನಾಶವಾಯಿತು, ಆ ರೀತಿ ಮತ್ತೆ ಆಗದಿರುವಂತೆ ಮಾಡಬೇಕಾದರೆ ತಾವೇನು ಅಗ್ರಿಕಲ್ಚರ್ ಡೆವಲಪ್‌ಮೆಂಟ್ ಸೆಂಟರ್‌ಗಳನ್ನು ಬೇರೆ ಕಡೆ ಮಾಡಿದ್ದೀರಿ ಅದೇ ರೀತಿ ಆ ಭಾಗದಲ್ಲೂ ಒಂದು ಸೆಂಟರನ್ನು ಮಾಡಿಸಿ ಈಗ ಇರತಕ್ಕ ಮಳೆ, ವಾತಾವರಣ, ನೋಡಿಕೊಂಡು ಯಾವ ಬೆಳೆ ಬೆಳೆಸಬೇಕು ಎಂಬ ಬಗ್ಗೆ ಕೃಷಿ ಇಲಾಖೆಯವರೇ ಮಾರ್ಗದರ್ಶನ ಮಾಡಿ, ಸಲಹೆ ಕೊಟ್ಟು ಬೆಳೆ ಬೆಳೆಯುವಂತೆ ಮಾಡಿದರೆ ಮಾತ್ರ ರೈತರಿಗೆ ಸಹಾಯ ಮಾಡಿದಂತೆ ಆಗುತ್ತದೆ. ಆ ಭಾಗದಲ್ಲಿ ನೀರಾವರಿ ಬಹಳ ಕಡಿಮೆ ಇದೆ. ಅಲ್ಲಿ ನೀರಾವರಿ ಪ್ರದೇಶವನ್ನು ಹೆಚ್ಚು ಮಾಡಲು ಸರ್ಕಾರ ಏನೇನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಅಲ್ಲಿ ಸ್ವಲ್ಪವಾದರೂ ಅಶ್ಯೂರ್ಡ್ ಇರಿಗೇಷನ್ ಇತ್ತು ಎಂದರೆ ಅಲ್ಲಿನ ಜನರಲ್ಲಿ ಸ್ವಲ್ಪವಾದರೂ ಸೆಕ್ಯುರಿಟಿ ಬರಲು ಸಾಧ್ಯವಾಗುತ್ತದೆ. 20-25 ವರ್ಷಗಳಿಂದ ಮುಗಿಸದಿರುವ ಅಲ್ಲನ ಕಾರಂಜ ಪ್ರಾಜೆಕ್ಟನ್ನು ಮುಗಿಸಲು ಸರ್ಕಾರ ಪೂರ್ಣ ಪ್ರಯತ್ನ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಅಲ್ಲಿ 12 ಕಡೆಗಳಲ್ಲಿ ಬ್ರಿಡ್ಜ್ ಕಮ್ ಬ್ಯಾರೇಜ್ ಮಾಡಿ ಲಿಫ್ಟ್ ಇರಿಗೇಷನ್ ಮಾಡಲು ಸಾಧ್ಯತೆಗಳಿದೆ. ಇದರ ಬಗ್ಗೆ ಸರ್ಕಾರ ಗಂಭೀರವಾಗಿ ವಿಚಾರ ಮಾಡಿ ಆ ಕೆಲಸವನ್ನು ಮಾಡಲು ವ್ಯವಸ್ಥೆ ಮಾಡಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಈ ವಿಚಾರಗಳ ಬಗ್ಗೆ ಗಂಭೀರವಾಗಿ ಪರಿಗಣಿಸಿ ಪರಿಹಾರವನ್ನು ಕಂಡುಹಿಡಿಯುತ್ತೀರೆಂದು ನಂಬಿರುತ್ತೇನೆ. ಬರುವ ದಿವಸಗಳಲ್ಲಿ ಕೃಷಿ ಇಲಾಖೆಗೆ ಹೆಚ್ಚಿನ ಬಜೆಟ್ಟನ್ನು ಒದಗಿಸಿ ಇಡೀ ರಾಜ್ಯಕ್ಕೆ ಅನ್ವಯವಾಗುವ ಹಾಗೆ ಕಾಂಪ್ರಹೆನ್‌ಸೀವ್ ಕ್ರಾಪ್ ಇನ್‌ಷ್ಯೂರೆನ್ಸ್ ಸ್ಕೀಮನ್ನು ರೈತರಿಗೆ ಮಾಡಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಪ್ರಾರಂಭದಲ್ಲಿ ವಿಮಾ ಮೊತ್ತವನ್ನು ಸರ್ಕಾರವೇ ಸಂಪೂರ್ಣವಾಗಿ ಕಟ್ಟಿ ಅನಂತರದ ದಿವಸಗಳಲ್ಲಿ ರೈತರೂ ಸ್ವಲ್ಪ ಪ್ರಮಾಣದಲ್ಲಿ ಪ್ರೀಮಿಯಂ ಕಟ್ಟುವ ವ್ಯವಸ್ಥೆ ಮಾಡಿದರೆ ಈ ಕ್ರಾಪ್ ಇನ್‌ಶ್ಯೂರೆನ್ಸ್ ಸ್ಕೀಮನ್ನು ಜಾರಿಗೆ ತರಲು ಸಾಧ್ಯವಾಗುತ್ತದೆ. ಇದರ ಬಗ್ಗೆ ಸರ್ಕಾರ ಗಂಭೀರವಾಗಿ ಯೋಚನೆ ಮಾಡಬೇಕು. ಇಷ್ಟು ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎನ್. ರಾಜಣ್ಣ (ಭಾರತೀನಗರ) : ಮಾನ್ಯ ಅಧ್ಯಕ್ಷರೆ, ನಾನು ಕಳೆದ ಮೂರೂ ವರ್ಷಗಳಲ್ಲಿ ಅರ್ಬನ್ ಡೆವಲಪ್‌ಮೆಂಟ್, ಬೆಂಗಳೂರು ನಗರ ಇದರ ಬಗ್ಗೆ ಮಾತ್ರ ಮಾತನಾಡಿದ್ದೇನೆ. ಆದರೆ ಈ ಬಾರಿ ಬೇಡಿಕೆಯ ಸಂಖ್ಯೆ 1,2,3,4, I am going to speak on agriculture, Horticulture, Animal Husbandry and Fisheries.